## 36. ರಕ್ಷಣಾ ತಯಾರಿಕೆಗೆ ಶೇ.74. ಎಫ್‌ಡಿಐ

ರಕ್ಷಣಾ ಕ್ಷೇತ್ರವನ್ನು ಸ್ವಾವಲಂಬಿಯನ್ನಾಗಿ ಮಾಡುವ ಉದ್ದೇಶದಿಂದ ರಕ್ಷಣಾ ತಯಾರಿಕೆ ವಲಯಕ್ಕೆ ಶೇ.74 ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಆತ್ಮನಿರ್ಭರ ಭಾರತ ಡಿಫೆನ್ಸ್ ಇಂಡಸ್ಟ್ರಿ ವೆಬಿನಾರ್‌ನ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಸ್ವಯಂಚಾಲಿತ ಹೂಡಿಕೆ ಮಾರ್ಗದಲ್ಲೇ ಬಂಡವಾಳವನ್ನು ಆಕರ್ಷಿಸಲಾಗುತ್ತದೆ. ಜೊತೆಗೆ ರಕ್ಷಣಾ ಉತ್ಪಾದನೆಯನ್ನು ಹೆಚ್ಚಿಸಲು ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಮತ್ತು ಖಾಸಗಿ ವಲಯದವರಿಗೆ ರಕ್ಷಣಾ ಕ್ಷೇತ್ರದಲ್ಲಿ ಪ್ರಮುಖ ಪಾತ್ರ ನೀಡಲು ಪ್ರಯತ್ನಿಸಲಾಗುತ್ತಿದೆ. ಮಿಲಿಟರಿಯಲ್ಲಿ ದೇಶೀಯ ಸಾಧನಾ–ಸಲಕರಣೆಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಕೆಲವು ರಕ್ಷಣಾ ವಸ್ತುಗಳ ಆಮದಿಗೆ ನಿರ್ಬಂಧ ವಿಧಿಸಲಾಗಿದೆ ಎಂದು ತಿಳಿಸಿದರು.

ಆತ್ಮನಿರ್ಭರ ಅಭಿಯಾನದ ಪ್ರಯತ್ನ ಹಿಂದೂ ಮಹಾಸಾಗರದ ಭಾಗದಲ್ಲಿ ಭದ್ರತಾ ಪೂರೈಕೆದಾರರಾಗುವಲ್ಲಿ ಭಾರತದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಭಾರತದಲ್ಲಿಯೇ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕೆಂದು ನಾವು ಬಯಸುತ್ತೇವೆ ಎಂದರು.

**ಇನ್ನೆರಡು ಅವಾಕ್ಸ್ ಖರೀದಿಗೆ ಭಾರತ ಸಜ್ಜು:** ಚೀನಾದೊಂದಿಗಿನ ಗಡಿ ಬಿಕ್ಕಟ್ಟು ಮುಂದುವರಿದಿರುವುದರ ನಡುವೆ, ಇಸ್ರೇಲ್‌ನಿಂದ ಇನ್ನೂ ಎರಡು ಅತ್ಯಾಧುನಿಕ ವೈಮಾನಿಕ ಎಚ್ಚರಿಕೆ ಹಾಗೂ ನಿಯಂತ್ರಣ ವ್ಯವಸ್ಥೆಯ (ಅವಾಕ್ಸ್) 'ಫಾಲ್ಕನ್' ಖರೀದಿಸಲು ಭಾರತ ಮುಂದಾಗಿದೆ. ವೈಮಾನಿಕ ಕಣ್ಗಾವಲು ಇಡುವಲ್ಲಿ ನಿಖರ ಸಾಮರ್ಥ್ಯದ ಅವಾಕ್ಸ್ 'ಆಗಸದ ಕಣ್ಣು' ಎಂದೇ ಖ್ಯಾತಿ ಪಡೆದಿದೆ.

ಎರಡು ಅವಾಕ್ಸ್‌ಗೆ ಸುಮಾರು ರೂ.7388 ಕೋಟಿ (ಒಂದು ಬಿಲಿಯನ್ ಡಾಲರ್) ವೆಚ್ಚವಾಗಲಿದೆ. ಇದು ದುಬಾರಿ ಎನ್ನುವ ಕಾರಣಕ್ಕೆ ಹಿಂದೆ ಹಲವು ಬಾರಿ ಖರೀದಿ ಪ್ರಸ್ತಾಪನೆ ಕೈ ಬಿಡಲಾಗಿತ್ತು. ಆದರೆ ಈಗ ಗಡಿ ತಂಟೆ ಹೆಚ್ಚಿರುವುದರಿಂದ ಅದನ್ನು ಪಡೆಯುವುದು ಅನಿವಾರ್ಯ ಎಂಬ ಸ್ಥಿತಿಯಲ್ಲಿ ಭದ್ರತೆ ಕುರಿತ ಸಂಪುಟ ಸಮಿತಿ (ಸಿಸಿಎಸ್) ಇದಕ್ಕೆ ಒಪ್ಪಿಗೆ ನೀಡುವ ನಿರೀಕ್ಷೆಯಿದೆ. ಹೊಸದಾಗಿ ಪಡೆಯುವ ಅವಾಕ್ಸ್‌ಗಳು ಹಿಂದಿನ ಮೂರಕ್ಕಿಂತ ಹೆಚ್ಚು ಆಧುನಿಕ ಹಾಗೂ ಮೇಲ್ದರ್ಜೆಗೇರಿಸಲಾದ ವ್ಯವಸ್ಥೆಯಾಗಿರುತ್ತದೆ ಎಂದು ಮೂಲಗಳು ತಿಳಿಸಿವೆ.

**ಅಕ್ಟೋಬರ್‌ಗೆ ಹೊಸ ವಾಯು ರಕ್ಷಣಾ ಕಮಾಂಡ್:** ಭಾರತೀಯ ವಾಯು ಪಡೆಯ (ಐಎಎಫ್) ನೇತೃತ್ವದಲ್ಲಿ ಹೊಸ ವೈಮಾನಿಕ ರಕ್ಷಣಾ ಕಮಾಂಡ್ ರಚಿಸಲು ಮಿಲಿಟರಿ ವ್ಯವಹಾರಗಳ ಇಲಾಖೆ ಮುಂದಾಗಿದೆ. ಅಕ್ಟೋಬರ್ ಎರಡನೇ ವಾರದೊಳಗೆ ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಬಳಿ ಅದು ತಲೆಯೆತ್ತುವ ಸಂಭವವಿದೆ. ಮೂರು ಪಡೆಗಳ ನಡುವೆ ಸಮನ್ವಯ ಸಾಧಿಸಿ ದೇಶದ ವಾಯು ಪ್ರದೇಶವನ್ನು ರಕ್ಷಿಸುವುದು ಕಮಾಂಡೆನ್ ಉದ್ದೇಶವಾಗಿದೆ.

ನೌಕಾ ಪಡೆಯ ಒಂದು ಕಮಾಂಡ್ ರಚಿಸಲು ಕೂಡ ಮೂರು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಬಿಪಿನ್ ರಾವತ್ ಕಾರ್ಯಪ್ರವೃತ್ತರಾಗಿದ್ದಾರೆ. ಅದು ಕೇರಳದ ಕೊಚ್ಚಿ ಅಥವಾ ಕರ್ನಾಟಕದ ಕಾರವಾರದ ಬಳಿ ಕೇಂದ್ರ ಸ್ಥಾನ ಹೊಂದಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಆಧಾರ:ಉದಯವಾಣಿ, ದಿನಾಂಕ:28.08.2020